ಕರ್ನಾಟಕ ಸರ್ಕಾರ

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

(ಸಿ.ಆರ್.ಪಿ. 67)

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ದಾಂಡೇಲಿ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ. 184-2012

............................ ವಿರುದ್ಧ ............................

PW 03
CW 03

| | | |
|---|---|---|
| ಸಾಕ್ಷಿ ಹೆಸರು | ಃ | ಲಕ್ಷ್ಮಣ ರಾಮ ಗೋವಡೆ |
| ತಂದೆಯ ಹೆಸರು | ಃ | ರಾಮ ಗೋವಡೆ |
| ವಯಸ್ಸು | ಃ | 32 ವರ್ಷ |
| ಉದ್ಯೋಗ | ಃ | ಕೂಲಿ |
| ವಾಸಸ್ಥಳ | ಃ | ಜೋಯಿಡಾ |

ದಿನಾಂಕಃ 13-11-2022 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ.

ಸಾಕ್ಷಿಯು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ 1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 1 ಸಿ ಎಂದು ಗುರುತಿಸಲಾಯಿತು. ಮುದ್ದೆ ಮಾಲುಗಳ ಮೇಲೆ ಅಂಟಿಸಿದ ಚೀಟಿಗಳ ಮೇಲಿರುವ ಸಹಿಗಳನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಒಟ್ಟಾಗಿ ಮು. ಮಾ 1 ಎಂದು ಗುರುತಿಸಲಾಗಿದ್ದು, ನನ್ನ ಸಹಿಗಳನ್ನು ಒಟ್ಟಾಗಿ ಮು. ಮಾ 1 ಸಿ ಎಂದು ಗುರುತಿಸಲಾಯಿತು. ಸದ್ರಿ ಸಹಿಗಳನ್ನು ನಾನು ದಿಃ 23-09-2011 ರಂದು ಆನಮೋಡ ಚೆಕ್ಕ ಪೋಸ್ಟನಲ್ಲಿ ಮಾಡಿರುತ್ತೇನೆ. ಚಾಸಾ 1 ರವರಿಗೆ ಸಂಜೆ 7-00 ಗಂಟೆಯ ಸಮಾರಿಗೆ ಅಕ್ರಮ ಸಾರಾಯಿ ಸಾಗಾಟ ಬಗ್ಗೆ ಮಾಹಿತಿ ಬಂದಿದ್ದು, ನನ್ನನ್ನು ಹಾಗೂ ಚಾಸಾ 3 ರವರನ್ನು ಅಲ್ಲಿಯೇ ಇರುವಂತೆ ಸೂಚಿಸಿದರು. ರಾತ್ರಿ

8-00 ಗಂಟೆಯ ಸುಮಾರಿಗೆ ಜಿಜೆ-03-ಎಟಿ-4572 ನೇ ವಾಹನ ಬಂದಿದ್ದು, ಚಾಸಾ 1 ರವರನ್ನು ಚಾಲಕನನ್ನು ವಿಚಾರಿಸಿದಾಗ ವಾಹನ ಚಾಲಕನು ತಾನು ಗುಜರಾತಗೆ ಹೋಗಿತ್ತಿದ್ದು, ವಾಹನದಲ್ಲಿ ಯಾವುದೇ ಮದ್ಯ ಇಲ್ಲವೆಂದು ತಿಳಿಸಿರುತ್ತಾರೆ. ನಂತರ ಚಾಸಾ 1 ರವರಿಗೆ ಸಂಶಯ ಬಂದು, ವಾಹನವನ್ನು ಪರಿಶೀಲನೆ ಮಾಡಿದಾಗ ವಾಹನದ ಹಿಂಬದಿ ಯಲ್ಲಿ 21 ಮದ್ಯದ ಬಾಕ್ಸಗಳು ಕಂಡು ಬಂದಿರುತ್ತವೆ. ಯಾವ ಕಂಪನಿಯ ಮದ್ಯದ ಬಾಟಲಗಳಾಗಿದ್ದವು ಎಂದು ನನಗೆ ಹೇಳಲು ಆಗುವುದಿಲ್ಲ. ನಮ್ಮ ಸಮಕ್ಷಮ ಚಾಸಾ 1 ರವರು ಸದ್ರಿ ಬಾಕ್ಸಗಳಿಂದ ತಲಾ ಒಂದು ಬಾಕ್ಸನಿಂದ 21 ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿಯನ್ನು ತೆಗೆದು, ಹಾಗೂ ಅವುಗಳನ್ನು ಬಿಳಿ ಬಟ್ಟೆಗಳಲ್ಲಿ ಸುತ್ತಿ ಸೀಲ್ ಮಾಡಿ ಪಂಚರ ಸಹಿವುಳ್ಳ ಚೀಟಿಯನ್ನು ಅಂಟಿಸಿರುತ್ತಾರೆ. ನಂತರ ವಾಹನವನ್ನು ಹಾಗೂ 1ನೇ ಆರೋಪಿಯನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ. ನಂತರ ರಾತ್ರಿ 08-30 ರಿಂದ 9-30 ರ ವರಗೆ ಪಂಚನಾಮೆಯನ್ನು ಜರುಗಿಸಿರುತ್ತಾರೆ. 1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದಲ್ಲಿ 1ನೇ ಆರೋಪಿ ಗೈರು ಹಾಜರಿದ್ದು, ಆರೋಪಿ ಪರ ವಕೀಲರು ಆರೋಪಿಯ ಗುರುತಿಸುವಿಕೆ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ನುಡಿದಿರುತ್ತಾರೆ.

**(ಈ ಹಂತದಲ್ಲಿ ಎ.ಪಿ.ಪಿ. ರವರ ವಿನಂತಿ ಮೇರೆಗೆ ಸಾಕ್ಷಿಯನ್ನು ಬಾಗಾಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಎ.ಪಿ.ಪಿ. ರವರಿಂದ.**

ಸದ್ರಿ ಬಾಕ್ಸಗಳಲ್ಲಿ ಎಗ್ಗ್ ಗೋಲ್ಡ್ ವಿಸ್ಕಿ 750 ಎಂ ಎಲ್‌ನ 12 ಬಾಟಲಗಳು ಒಂದು ಬಾಕ್ಸನಲ್ಲಿ, ಇಂಪಿರಿಯಲ್ ಬ್ಲ್ಯೂ ವಿಸ್ಕಿ 750 ಎಂ ಎಲ್‌ನ 24 ಬಾಟಲಗಳು

ಎರಡು ಬಾಕ್ಸಗಳಲ್ಲಿ, ಬ್ಲೆಂಡರ್ ಸ್ಪ್ರೈಡ್ ವಿಸ್ಕಿ 750 ಎಂ ಎಲ್‌ನ 60 ಬಾಟಲಗಳು ಐದು ಬಾಕ್ಸಗಳಲ್ಲಿ, ಐಂಟಿ ಕ್ಯೂಟಿ ಬ್ಲ್ಯೂ ವಿಸ್ಕಿ 750 ಎಂ ಎಲ್‌ನ 60 ಬಾಟಲಗಳು ಐದು ಬಾಕ್ಸಗಳಲ್ಲಿ, ರಾಯಲ್ ಟ್ಯಾಗ ವಿಸ್ಕಿ 750 ಎಂ ಎಲ್‌ನ 96 ಬಾಟಲಗಳು ಎಂಟು ಬಾಕ್ಸಗಳಲ್ಲಿ, ಇರುವುದು ಒಟ್ಟು 21 ಬಾಕ್ಸಗಳಲ್ಲಿ 189 ಲೀಟರ್ ಮದ್ಯ ಇರುವುದು ಕಂಡು ಬಂದಿರುತ್ತವೆ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ. ಎಸ್.ಕೆ.ಎಸ್ ವಕೀಲರಿಂದ. ಸಮಯ ಕೋರಿದ್ದು, ಸಮಯ ನೀಡಲಾಯಿತು

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ದಾಂಡೇಲಿ.